3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ , ತುಮಕೂರು

**Spl.C. No.158/2021**

ಪ್ರಾಸಾ 13

ಚಾಸಾ 24

| | |
|---|---|
| ಹೆಸರು | ಸಂಜೀವರಾಜು.ಡಿ. |
| ತಂದೆಯ ಹೆಸರು | ಲೇಟ್ ದೊಡ್ಡಬಾಲಯ್ಯ |
| ವಯಸ್ಸು | 53 ವರ್ಷ |
| ಉದ್ಯೋಗ | ಎಎಸ್ಐ, ಕೋಳಾಲ ಪೋಲೀಸ್ ಠಾಣೆ |
| ವಾಸಸ್ಥಳ | ಕೋಳಾಲ |

ಸಾಕ್ಷಿಯನ್ನು ದಿನಾಂಕ 05.06.2026 ರಂದು ಕರೆಸಿ ಪ್ರಮಾಣೀಕರಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1) ಮೇ 2015 ರಿಂದ ಜುಲೈ 2021 ರವರೆಗೆ ನಾನು ಮಿಡಿಗೇಶಿ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ಅವಧಿಯಲ್ಲಿ ಮಧುಗಿರಿ ಉಪವಿಭಾಗದ ಡಿವೈಎಸ್ಪಿಯಾಗಿ ಚಾಸಾ.29 ರವರು ಕರ್ತವ್ಯ ನಿರ್ವಹಿಸುತ್ತಿದ್ದರು.

2) ದಿನಾಂಕ 18.11.2019 ರಂದು ಚಾಸಾ.29 ರವರೊಂದಿಗೆ ಗೂಲಹಳ್ಳಿ ಗ್ರಾಮಕ್ಕೆ ಭೇಟಿ ನೀಡಿದ್ದು ಚಾಸಾ.1 ರವರ ಮನೆಯಲ್ಲಿ ಚಾಸಾ.29 ರವರು ಕೈಗೊಂಡ ಸ್ಥಳ ಪಂಚನಾಮಯನ್ನು ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿರುತ್ತೇನೆ. ದಿನಾಂಕ 19.11.2019 ರಂದು ಮಧುಗಿರಿ ಸರ್ಕಾರಿ ಆಸ್ಪತ್ರೆಗೆ ಚಾಸಾ.29 ರವರೊಂದಿಗೆ

ಹೋಗಿದ್ದು ಅಲ್ಲಿ ಮೃತ ಸಂಜೀವರಾಯಪ್ಪರವರ ಶವ ಪಂಚನಾಮೆಯನ್ನು ಮಾಡಿಕೊಂಡಿದ್ದು, ಪಂಚನಾಮೆಯನ್ನು ನಾನು ಟೈಪ್ ಮಾಡಿರುತ್ತೇನೆ.

3) ಅದೇ ದಿನ ಸಂಜೆ ಮೃತನ ಮೈಮೇಲೆ ಇದ್ದ ಬಟ್ಟೆಗಳನ್ನು ಶವದ ಬೆಂಗಾವಲಿಗೆ ನೇಮಿಸಿದದ ಸಿಬ್ಬಂದಿ ಬಂದು ಹಾಜರುಪಡಿಸಿದ್ದು ಆಗ ಚಾಸಾ.29 ರವರು ಅಮಾತನ್ನುಪಡಿಸಿಕೊಂಡು ಪಂಚನಾಮೆಯನ್ನು ಮಾಡಿಕೊಂಡಿರುತ್ತಾರೆ. ಸದರಿ ಪಂಚನಾಮೆಯನ್ನು ನಾನೇ ಟೈಪ್ ಮಾಡಿರುತ್ತೇನೆ.

4) ದಿನಾಂಕ 13.12.2019 ರಂದು ತನಿಖಾಧಿಕಾರಿಯವರ ನೇಮಕದಂತೆ ಯಲ್ಲೂರು ಗ್ರಾಮದ ವಿಶ್ವ ಭಾರತಿ ಪ್ರೌಢಶಾಲೆಗೆ ಭೇಟಿ ಕೊಟ್ಟು ಮೃತನ ಬಾಬ್ತು ಟಿಸಿ ಮತ್ತು ಮೃತನು ಟಿಸಿ ಪಡೆದುಕೊಳ್ಳಲು ಸಲ್ಲಿಸಿದ್ದ ಮನವಿ ಪತ್ರಗಳನ್ನು ಪಡೆದುಕೊಂಡು ಚಾಸಾ.29 ರವರಿಗೆ ನೀಡಿರುತ್ತೇನೆ. ಅವುಗಳನ್ನು ಚಾಸಾ.29 ರವರು ವಶಕ್ಕೆ ತೆಗೆದುಕೊಂಡು ನಿಪಿ.9 ರಂತೆ ಮಹಜರನ್ನು ಮಾಡಿಕೊಂಡಿರುತ್ತಾರೆ. ನಿಪಿ.9 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.9(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮೃತ ಸಂಜೀವರಾಯಪ್ಪರವರು ನೀಡಿರುವ ಮನವಿ ಪತ್ರವನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.12 ಎಂದು ಗುರುತಿಸಲಾಗಿದೆ.

5) ತನಿಖಾ ಕಾಲದಲ್ಲಿ ನಮ್ಮ ಇಲಾಖೆಯಿಂದ ನೀಡಿರುವ ಸೋನಿ ಹ್ಯಾಂಡಿ ಕ್ಯಾಮರಾದಿಂದ ಸಾಕ್ಷಿದಾರರ ಹೇಳಿಕೆಗಳನ್ನು ವೀಡಿಯೋ ಚಿತ್ರೀಕರಣ ಮಾಡಿಕೊಂಡಿರುತೆತೇನೆ. ನಂತರ ಆಡಿಯೋ ವೀಡಿಯೋ ಫೂಟೇಜ್ ಗಳನ್ನು ಕಂಪ್ಯೂಟರ್ ಮುಖಾಂತರ ಡಿವಿಡಿಗೆ ವರ್ಗಾಯಿಸಿರುತ್ತೇನೆ. ಡಿವಿಡಿಯನ್ನು ನಿಪಿ.13 ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಭಾ.ಸಾ.ಅ.ಕಲಂ 65 ಬಿ ರಡಿಯಲ್ಲಿ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನಿಪಿ.14, ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ.B.K.P.S. ವಕೀಲರಿಂದ :**

6) ಸ್ಥಳ ಪಂಚನಾಮೆಯಲ್ಲಿ ನಾನು ಟೈಪ್ ಮಾಡಿರುತ್ತೇನೆಂದು ಸಹಿ ಮಾಡಿರುವುದಿಲ್ಲ. ಶವ ಪಂಚನಾಮಯಲ್ಲಿಯೂ ಸಹ ನಾನು ಟೈಪ್ ಮಾಡಿರುತ್ತೇನೆಂದು ಸಹಿ ಮಾಡಿರುವುದಿಲ್ಲ. ದಿಃ19.11.2019 ರಂದು ಡಿವೈಎಸ್‌ಪಿರವರ ಕಚೇರಿಯಲ್ಲಿ ಮಾಡಿಕೊಂಡ ಪಂಚನಾಮೆಗೆ ನಾನು ಸಹಿ ಮಾಡಿರುವುದಿಲ್ಲ. ಡಿವೈಎಸ್‌ಪಿರವರು ಮೃತನ ಬಾಬತ್ತು ಶಾಲಾ ದಾಖಲಾತಿಗಳನ್ನು ತರುವಂತೆ ಯಾವುದೇ ಲಿಖಿತ ಆದೇಶವನ್ನು ಮಾಡಿರುವುದಿಲ್ಲ. ಡಿವೈಎಸ್‌ಪಿರವರು ಶಾಲೆಗೆ ದಿಃ13.12.2019 ರಂದು ಮನವಿ ಪತ್ರವನ್ನು ಕೊಟ್ಟಿದ್ದರು. ಅದರಲ್ಲಿ ನನ್ನ ಹೆಸರು ಉಲ್ಲೇಖ ಇರುವುದಿಲ್ಲ. ಮನವಿ ಪತ್ರವನ್ನು ಮುಖ್ಯೋಪಾಧ್ಯಾಯರಿಗೆ ನೀಡಿರುತ್ತೇನೆ. ಅವರ ಹೆಸರು ನೆನಪಿಲ್ಲ. ಮುಖ್ಯೋಪಾಧ್ಯಾಯರು ನಿಪಿ.12 ಮತ್ತು ಮೃತನ ಬಾಬತ್ತು ಟಿಸಿ ನೀಡುತ್ತಿದ್ದೇನೆ ಎಂದು ಯಾವುದೇ ಕವಚ ಪತ್ರವನ್ನು ನೀಡಿರುವುದಿಲ್ಲ. ಸದರಿ ದಾಖಲಾತಿಗಳನ್ನು ನನ್ನ ಮೇಲಧಿಕಾರಿಗಳ ಮಾತನ್ನು ಕೇಳಿಕೊಂಡು ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಮಹಜರನ್ನು ಟೈಪ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಅವುಗಳಲ್ಲಿ ನಾನು ಸಹಿಗಳನ್ನು ಮಾಡಿಲ್ಲ ಎಂದರೆ ಸರಿಯಲ್ಲ.

7) ವೀಡಿಯೋ ಮಾಡಿಕೊಳ್ಳಲು ನಾನು ಯಾವುದೇ ವಿಶೇಷ ತರಬೇತಿಯನ್ನು ಪಡೆದುಕೊಂಡಿಲ್ಲ , ಆದರೆ ಇಲಾಖೆಯಿಂದ ನೀಡಿರುವ ತರಬೇತಿಯನ್ನು ಪಡೆದುಕೊಂಡಿರುತ್ತೇನೆ. ನಮ್ಮ ಮೇಲಧಿಕಾರಿಗಳು ಸೃಷ್ಟಿ ಮಾಡಿಕೊಂಡಿರುವ ದಾಖಲಾತಿಗಳಿಗೆ ಅನುಕೂಲವಾಗುವಂತೆ ಪ್ರಮಾಣಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ಮೇಲಧಿಕಾರಿಗಳ ಮಾತನ್ನು ಕೇಳಿಕೊಂಡು ಆರೋಪಿತರ ವಿರುದ್ಧ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸಾ ಸ ಇ ಎ ಒ

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.

ಸಾಕ್ಷಿಯ ಸಹಿ